# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಬೆಂಗಳೂರು

## ಅಧಿಸೂಚನೆ. ಸಂಖ್ಯೆ ವೈ/01/4, ದಿನಾಂಕ 25ನೇ ಮಾರ್ಚ್ 2005

## ಕವಿನಿ ಆಯೋಗ(ವಿದ್ಯುತ್ ಸರಬರಾಜಿನ ವೆಚ್ಚದ ವಸೂಲಾತಿ) ವಿನಿಯಮಗಳು, 2004ಕ್ಕೆ ತಿದ್ದುಪಡಿ

ಪೀಠಿಕೆ:

ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 43ರ ಅನ್ವಯ ಯಾವುದೇ ವ್ಯಕ್ತಿಗೆ ವಿದ್ಯುಚ್ಛಕ್ತಿಯ ಅಗತ್ಯವಿದಲ್ಲಿ, ಅಂತಹ ವ್ಯಕ್ತಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಸಂಬಂಧಿತವಾಗಿ ಭರಿಸುವ, ವಿದ್ಯುಚ್ಛಕ್ತಿ ಮಾರ್ಗ ನಿರ್ಮಾಣ ವೆಚ್ಚ, ಅಥವಾ ಸರಬರಾಜನ್ನು ಮಾಡಲು ಯಾವುದೇ ಸ್ಥಾವರದ ಉಪಯೋಗದ ವೆಚ್ಚ, ಈ ರೀತಿಯ ಅಗತ್ಯ ವೆಚ್ಚಗಳನ್ನು ವಸೂಲಿ ಮಾಡುವ ಸಲುವಾಗಿ ವಿದ್ಯುಚ್ಛಕ್ತಿ ಅಧಿನಿಯಮ, 2003ರ ಪರಿಚ್ಛೇದ 46ರ ಪ್ರಕಾರ ವಿತರಣಾ ಲೈಸೆನ್ಸನ್ನು ನೀಡಲು ರಾಜ್ಯ ಆಯೋಗವು ಅಧಿಕೃತಗೊಂಡಿದೆ. ಅಧಿನಿಯಮದ ಪರಿಚ್ಛೇದ 181ರೊಂದಿಗೆ ಓದಿಕೊಳ್ಳಲಾದ ಹಾಗೂ ದತ್ತವಾದ ಈ ಅಧಿಕಾರದ ಮೂಲಕ ಆಯೋಗವು ಕವಿನಿ ಆಯೋಗ(ವಿದ್ಯುತ್ ಸರಬರಾಜು ವೆಚ್ಚಗಳ ವಸೂಲಿ) ವಿನಿಯಮಗಳು, 2004ನ್ನು ಸಂಖ್ಯೆ ವೈ:01:4, ದಿನಾಂಕ 12--11--2004ರ ಮೂಲಕ ಅಧಿಸೂಚಿಸಿದ್ದು, ಈ ವಿನಿಯಮಗಳನ್ನು ದಿನಾಂಕ 16--12--2004ರ ಕರ್ನಾಟಕ ರಾಜ್ಯ ಪತ್ರದ ಭಾಗ--3ರಲ್ಲಿ (ಪುಟ ಸಂಖ್ಯೆ 2216ರಿಂದ2222) ಪ್ರಕಟಪಡಿಸಿದೆ.

ಕವಿನಿ ಆಯೋಗ(ವಿದ್ಯುತ್ ಸರಬರಾಜು ವೆಚ್ಚಗಳ ವಸೂಲಿ) ವಿನಿಯಮಗಳು, 2004ನ್ನು ಆದೇಶಿಸಿರುವುದರಿಂದ, ಕವಿನಿಆ (ವಿದ್ಯುಚ್ಛಕ್ತಿ ಸರಬರಜು ಮತ್ತು ವಿತರಣೆ) ಸಂಹಿತೆ, 2000--01ರ ಕೆಲವು ಷರತ್ತುಗಳು (ಕೆಳಗೆ ತಿಳಿಸಿರುವ) ಮತ್ತಷ್ಟು ಸದೃಢಗೊಂಡಿವೆ :

ಎ) 9.00(ಎ),9.00(ಬಿ),9.00(ಸಿ)

ಬಿ) 9.02

ಸಿ) 9.04

ಡಿ) 9.05

ಇ) 9.07

ಎಫ್) ಪರಿಚ್ಛೆದ 9.08(ಬಿ)(4)ರಲ್ಲಿನ ಟಿಪ್ಪಣಿಯನ್ನು ಹೊರತುಪಡಿಸಿ,9.08

ಜಿ) 9.11(2)

ಎಚ್) 10.02

ಐ) 10.04

ಜೆ) 10.05

ಕೆ) 10.07

ಎಲ್) 10.08

ಎಂ) 10.12

## ತಿದ್ದುಪಡಿ

ವಿದ್ಯುಚ್ಛಕ್ತಿ ಅಧಿನಿಯಮ 2003(2003ರ ಕೇಂದ್ರ ಕಾಯಿದೆ 36)ರ ಪರಿಚ್ಛೇದ 181ರ ಮೂಲಕ ದತ್ತವಾದ ಅಧಿಕಾರ ಹಾಗೂ ಪರಿಚ್ಛೇದ 46, ಪರಿಚ್ಛೇದ 43ರ ಉಪಪರಿಚ್ಛೇದ(2)ರ ಅನುಸರಣೆಯಾಗಿ, ಹಾಗೂ ಇದರ ಪರವಾಗಿ ಎಲ್ಲ ಅಧಿಕಾರಗಳ ಅವಕಾಶವನ್ನು ಕಲ್ಪಿಸಿ, ಆಯೋಗವು ಕವಿನಿ ಆಯೋಗ(ವಿದ್ಯುತ್ ಸರಬರಾಜು ವೆಚ್ಚಗಳ ವಸೂಲಿ) ವಿನಿಯಮಗಳು, 2004ನ್ನು ಈ ಮುಂದೆ ತಿಳಿಸಿರುವಂತೆ ಮತ್ತಷ್ಟು ತಿದ್ದುಪಡಿಗೊಳಿಸಿದೆ.

I. ಶೀರ್ಷಿಕೆ ಹಾಗೂ ಪ್ರಾರಂಭ :

ಎ) ಈ ವಿನಿಯಮಗಳನ್ನು ಕವಿನಿಆ (ವಿದ್ಯುತ್ ಸರಬರಾಜು ವೆಚ್ಚಗಳ ವಸೂಲಿ) (ತಿದ್ದುಪಡಿ) ವಿನಿಯಮಗಳು, 2005 ಎಂದು ಹೆಸರಿಸಲಾಗಿದೆ.

ಬಿ) ಈ ವಿನಿಯಮಗಳು ಪುನಃ ತಿದ್ದುಪಡಿಗೊಳ್ಳದ ಹೊರತು ಅಧಿಕೃತವಾಗಿ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ ಜಾರಿಗೆ ಬರುತ್ತವೆ.

ಸಿ) ಈ ವಿನಿಯಮಗಳು ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುತ್ತದೆ.

II. ಕವಿನಿಆ (ವಿದ್ಯುತ್ ಸರಬರಾಜು ವೆಚ್ಚಗಳ ವಸೂಲಿ) (ತಿದ್ದುಪಡಿ) ವಿನಿಯಮಗಳು, 2004ಕ್ಕೆ ತಿದ್ದುಪಡಿಗಳು. ಅಂಕಣ 3ರಲ್ಲಿರುವ ಈಗಿನ ವಿನಿಯಮಗಳು ಅಂಕಣ 4ರಲ್ಲಿ ತಿಳಿಸಿರುವ ವಿನಿಯಮಗಳಿಂದ ಬದಲಾವಣೆಗೊಂಡಿವೆ:

| ಕ್ರ.ಸಂ. | ಪರಿಚ್ಛೇದ ಸಂಖ್ಯೆ | ಪ್ರಸ್ತುತ ಇರುವ ವಿನಿಯಮ | ತಿದ್ದುಪಡಿಗೊಂಡ ನಂತರ |
|---|---|---|---|
| 1 | 4.1.4 | ಇಲ್ಲ | ರದ್ದುಪಡಿಸಿರುವುದು:<br>1. ಈ ವಿನಿಯಮಗಳೊಂದಿಗೆ ಯಾವುದೇ ರೀತಿಯಲ್ಲಿ ಸಮಂಜಸವಾಗಿರದ ಅಥವಾ ಹೊಂದಿಕೆಯಾಗಿರದ ಕವಿನಿಆ (ವಿದ್ಯುತ್ ಸರಬರಾಜು ಮತ್ತು ವಿತರಣೆ) ಸಂಹಿತೆ, 2000-01ರ ಷರತ್ತುಗಳನ್ನು ಆ ಮಟ್ಟಿಗೆ ಕರ್ನಾಟಕ ರಾಜ್ಯಪತ್ರದಲ್ಲಿ ತಿದ್ದುಪಡಿಗೊಂಡ ದಿನಾಂಕದಿಂದ ರದ್ದುಪಡಿಗೊಂಡಿವೆ.<br>2. ಉಪಖಂಡ-1ರ ಪೂರ್ವಾಗ್ರಹವಿಲ್ಲದೆ, ಕವಿನಿಆ(ವಿದ್ಯುತ್ ಸರಬರಾಜು ಮತ್ತು ವಿತರಣೆ)ಸಂಹಿತೆ,2000-01ರ ಕೆಳಕಂಡ ಷರತ್ತುಗಳು ರದ್ದುಗೊಂಡಿವೆ:<br>ಎ. 9.00(ಎ), 9.00(ಬಿ), 9.00(ಸಿ)<br>ಬಿ. 9.02<br>ಸಿ) 9.04<br>ಡಿ) 9.05<br>ಇ) 9.07<br>ಎಫ್) ಪರಿಚ್ಛೇದ 9.08(ಬಿ)(4)ರಲ್ಲಿನ ಟಿಪ್ಪಣಿಯನ್ನು ಹೊರತುಪಡಿಸಿ,9.08<br>ಜಿ) 9.11(2)<br>ಎಚ್) 10.02<br>ಐ) 10.04<br>ಜೆ) 10.05<br>ಕೆ) 10.07<br>ಎಲ್) 10.08<br>ಎಂ) 10.12 |

ಆಯೋಗದ ಆದೇಶದಂತೆ,

ಕಾರ್ಯದರ್ಶಿ,
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ